ಶ್ರೀ ವಾಟಾಳ್ ನಾಗರಾಜ್ : ನಾನು ನನ್ನ ಮೂರು ಬೇಡಿಕೆಗಳನ್ನು ಮಂಡಿಸಿ ಧರಣಿ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಭಾವಿಗೆ ಬಂದು ಧರಣಿ ಕುಳಿತರು)

6. ಬೈವಾಟರ್ ಸಂಸ್ಥೆಗೆ ಗುತ್ತಿಗೆ ನೀಡಿರುವ ಬಗ್ಗೆ ಸದನ ಸಮಿತಿ ನೇಮಿಸುವುದಕ್ಕೆ ಒತ್ತಾಯ

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು) : ಅಧ್ಯಕ್ಷರೇ ಇಲ್ಲಿ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಕ್ಯಾಬಿನೆಟ್ ನೋಟ್ ಮತ್ತು ಹೆಚ್‌ಯುಡಿ ಡಿಪಾರ್ಟ್‌ಮೆಂಟ್‌ನವರ ಪ್ರೊಸೀಡಿಂಗ್ಸ್, ಬಿಡಬ್ಲ್ಯೂಎಸ್ ಚೇರ್ಮನ್‌ರವರು ಬರೆದ ಪತ್ರಗಳು ಇವೆಲ್ಲವನ್ನೂ ನೋಡಿದಾಗ ಒಂದಕ್ಕೊಂದು ಕಾಂಟ್ರಡಿಕ್ಟರಿಯಾಗಿವೆ. ಇಲ್ಲಿ ನೀವು ಹೇಳಿದ್ದು ಒಂದಾದರೆ, ಅಧ್ಯಕ್ಷರು ಮಾಡಿದ್ದು ಇನ್ನೊಂದು. ಇದನ್ನು ನೋಡಿದಾಗ ಬೆಂಗಳೂರಿನ ಜನತೆಯ ತಲೆಯ ಮೇಲೆ ಇಲ್ಲಿ ಅಧ್ಯಕ್ಷರು ಅಂದರೆ ಬಿಡಬ್ಲ್ಯೂಎಸ್‌ಬಿ ಅಧ್ಯಕ್ಷರು ಎಂದು ಅರ್ಥ. ಇದನ್ನು ಮುಂದುವರಿಸುವುದು ಬೇಡ ಅಂದರೆ ಅವರು ವಾಪಸ್ ತೆಗೆದುಕೊಂಡರೆ ಸಾಕು. ಹೌಸ್ ಕಮಿಟಿಯನ್ನು ಈ ಬಗ್ಗೆ ರಚಿಸಿದರೆ ಸಾಕು. ಹೇಗಾದರೂ ಕಮಿಟಿಯನ್ನು ಅಧ್ಯಕ್ಷರು ರಚನೆ ಮಾಡುತ್ತಾರೆ. ಅದರಲ್ಲಿ ನಮಗೆ ಬೇಕಾದವರು ನೂರಕ್ಕೆ ನೂರರಷ್ಟು ಜನರು ಇರುವುದಿಲ್ಲ. ಕಮಿಟಿಯ ಮುಂದೆ ನಿಮ್ಮ ರಿಕಾರ್ಡ್‌ನ್ನು ಇಟ್ಟು ಅವರು ಅದನ್ನು ಸರಿ ಎಂದು ಹೇಳುವುದಾದರೆ ಮುಂದಿನ ಕೆಲಸವೆನ್ನು ನೀವು ಮಾಡಿ.

ಶ್ರೀ ಸಿ. ಬೈರೇಗೌಡ (ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ಬಹಳ ಸ್ಪಷ್ಟವಾಗಿ ಎಲ್ಲಾ ವಿಚಾರಗಳಲ್ಲಿಯೂ ಉತ್ತರವನ್ನು ಕೊಟ್ಟಿದ್ದಾರೆ. ಅವರಲ್ಲಿ ಏನು ಸಾಮರ್ಥ್ಯವಿದೆ ಅದೆಲ್ಲವನ್ನೂ ಬಳಸಿಕೊಂಡು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಅವರ ಸ್ನೇಹಿತರ ಮನಸ್ಸನ್ನು ಕರಗಿಸತಕ್ಕಂಥ ಎಲ್ಲಾ ಪ್ರಯತ್ನಗಳನ್ನೂ ಮಾಡಿದ್ದಾರೆ. ಆದರೆ ನಮ್ಮ ವಿರೋಧ ಪಕ್ಷದ ನಾಯಕರು ಮತ್ತು ಸ್ನೇಹಿತರುಗಳು ಇಷ್ಟೊಂದು ಹಠ ಹಿಡಿದು ಕುಳಿತರೆ ಸರಕಾರ ಆ ಬಗ್ಗೆ ಏನು ಎಂದು ಹೇಳುವುದು ಕೂಡ ಕಷ್ಟವಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾವು ಯಾವ ಕೆಲಸದಲ್ಲಿಯೂ ಕೂಡ ಹಠ ಮಾಡಿಲ್ಲ. ಇಲ್ಲಿ ಅನ್ಯಾಯ ಇದೆ ಎಂದು ಕಂಡುಬಂದುದರಿಂದ ಮಾತ್ರ ಪ್ರಸ್ತಾಪ ಮಾಡುತ್ತಿದ್ದೇವೆಯೇ ಹೊರತು ನಿಮಗೆ ತೊಂದರೆ ಮಾಡಬೇಕೆಂದು ನಮ್ಮ ಉದ್ದೇಶವಲ್ಲ.

ಶ್ರೀ ವಿ. ಸೋಮಣ್ಣ (ಬೆಂಗಳೂರು ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ, ನೀರಿನ ದರವನ್ನು ನಿಗದಿಮಾಡಲು ಕಮಿಟಿಯನ್ನು ಮಾಡಿದ್ದೇವೆ. ಯಾವರೀತಿಯಲ್ಲಿ ನಾವು ಬೆಂಗಳೂರು ನಗರಕ್ಕೆ ನೀರನ್ನು ತರಬೇಕಾಗಿದೆಯೋ, ಅಷ್ಟು ದೊಡ್ಡ ಪ್ರಮಾಣದ ನೀರನ್ನು ನಾವು ಎಷ್ಟು ಹಣ ಕೊಟ್ಟು ಪಡೆದುಕೊಳ್ಳಬೇಕೆನ್ನುವ ಬಗ್ಗೆ ನಾವು ನೆಗೋಸಿಯೇಶನ್ ಕಮಿಟಿಗೆ ಕೊಟ್ಟಿದ್ದೇವೆ. ಆ ನೆಗೋಸಿಯೇಶನ್ ಕಮಿಟಿಯಲ್ಲಿ ಬಿಡಬ್ಲ್ಯೂಎಸ್‌ಎಸ್‌ನ ಚೇರ್ಮನ್ ಒಬ್ಬರೇ ಇಲ್ಲ. ಗೌರವಾನ್ವಿತ ಲಾ ಮತ್ತು ಫೈನಾನ್ಸ್ ಸೆಕ್ರೆಟರಿಯವರುಗಳು ಇದ್ದಾರೆ. ಈ ನಗರಕ್ಕೆ ಮೊದಲ ಮತ್ತು ಎರಡನೇ ಹಂತದ ನೀರನ್ನು ತಂದ ರಿಟೈರ್ಡ್ ಚೀಫ್ ಇಂಜಿನಿಯರ್ ಗುಲಾಂ ಅಹಮದ್‌ರವರು ಇದ್ದಾರೆ. ಹೀಗೆ

ಈ ಮೂವರು ಚೇರ್ಮನ್‌ರವರುಗಳು ಜೊತೆಗೆ ಇದ್ದು ಎಲ್ಲಾ ಸಾಧ್ಯಾಸಾಧ್ಯತೆಗಳನ್ನು ನೋಡಿ ಒಂದು ವರದಿಯನ್ನು ಸಚಿವಸಂಪುಟಕ್ಕೆ ಕೊಡುತ್ತಾರೆ. ರೇಟ್‌ನ ಬಗ್ಗೆ ಒಪ್ಪಿಕೊಳ್ಳಲು ಅಥವಾ ಬಿಡಲು ಸಚಿವ ಸಂಪುಟಕ್ಕೆ ಬಿಟ್ಟಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವೇನು ಹೀಗೆ ಮಾಡುತ್ತಿದ್ದೀರಿ ಅದು ಸರಿಯಲ್ಲ ಎಂಬುದೇ ನಮ್ಮ ವಾದ. ಇಲ್ಲಿ ಒಬ್ಬ ವ್ಯಕ್ತಿಯ ಬಗ್ಗೆ ನಮ್ಮ ವಾದವಿಲ್ಲ. ನೀವು ಒಂದು ನೆಗೋಸಿಯೇಶನ್ ಮಾಡಿ ಕಂಟ್ರಾಕ್ಟ್‌ನ್ನು ಪರ್ಚಿಕ್ಯುಲರ್ ಆಗಿ ಒಂದು ಕಂಪನಿಗೆ ಕೊಡಬೇಕೆಂದು ಯಾವ ನಿರ್ಣಯವನ್ನು ನೀವು ತೆಗೆದುಕೊಂಡಿದ್ದೀರಿ ಅದರ ವಿರುದ್ಧ ನಾವುಗಳು ಮಾತನಾಡಿದ್ದು. ನೀವು ಮಾತ್ರ ನಿಮ್ಮ ಕ್ರಮವನ್ನು ಸಮರ್ಥನೆ ಮಾಡಿಕೊಳ್ಳುತ್ತಿದ್ದೀರಿ. ಒಂದು ಕಡೆ ಇನ್ನೂ ಅಗ್ರಿಮೆಂಟ್ ಆಗಿಲ್ಲ ಎಂಬಿತ್ಯಾದಿ ಹೇಳುತ್ತಾ, ಇನ್ನೊಂದು ಕಡೆ ನಾವು ಅದೇ ಕಂಪನಿಯವರ ಜೊತೆಗೆ ನೆಗೋಶಿಯೇಟ್ ಮಾಡುವುದಕ್ಕೆ ಬೇರೆಯವರನ್ನು ಹಾಕಿ ನೆಗೋಶಿಯೇಟ್ ಮಾಡುತ್ತಾ ಇದ್ದೇವೆ ಎಂದು ಹೇಳುತ್ತೀರಿ.

ಅಧ್ಯಕ್ಷರು : ಈ ವಿಚಾರವನ್ನು ಈ ಮೊದಲೇ ತೆಗೆದುಕೊಳ್ಳಬಹುದಾಗಿತ್ತು. ಹೀಗೆ ಕಡೆಯ ದಿನ ಇಲ್ಲಿ ಪ್ರಸ್ತಾಪ ಮಾಡಿದ್ದೀರಿ. ಬಿಲ್‌ಗಳು ಪಾಸ್ ಆಗುವುದು ಇದೆ ; ಬೇರೆ ಕಲಾಪಗಳು ಇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ತಾವುಗಳು ಮುಖ್ಯಮಂತ್ರಿಯವರು ಬಂದಮೇಲೆ ಪ್ರಸ್ತಾಪಿಸಿ ಎಂದು ಆದೇಶಿಸಿದ್ದೀರಿ. ನಾವು ಮಾನ್ಯ ಮುಖ್ಯಮಂತ್ರಿಯವರು ಬರುತ್ತಾರೆ ಎಂದು ಕಾಯ್ದುಕೊಂಡು ಕುಳಿತಿದ್ದೇವೆ. ಹಾಗಾಗಿ ಇವೊತ್ತು ಚರ್ಚಿಸಿ ತರಬೇಕಾಯಿತು.

ನಾವು ಐದು ದಿವಸಗಳ ಮುಂಚೆಯೇ ಕೊಟ್ಟಿದ್ದೇವೆ. ಹೌಸ್ ಕಮಿಟಿ ಮಾಡಿ ಎಂದು ನಮ್ಮ ವಿನಂತಿ ಇದೆ.

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ವಿಚಾರದ ಬಗ್ಗೆ ಕೂಲಂಕಷವಾಗಿ ಚರ್ಚೆಯಾಗಿದೆ. ಮಾನ್ಯ ಸದಸ್ಯರುಗಳವರು ಹೇಳಬೇಕಾಗಿರತಕ್ಕಂಥ ಎಲ್ಲಾ ವಿಚಾರಗಳನ್ನೂ ಹೇಳಿದ್ದಾರೆ. ಹೇಳುವುದನ್ನು ಯಾವುದನ್ನೂ ಕೂಡ ಬಿಟ್ಟಿಲ್ಲ. ಸರಕಾರದ ವತಿಯಿಂದ ವಿಚಾರಕ್ಕೆ ಸಂಬಂಧಪಟ್ಟಂತೆ ಸಂಪೂರ್ಣವಾದಂಥ ಉತ್ತರವನ್ನು ಕೊಟ್ಟಿದ್ದಾರೆ. ಹೀಗೆ ಸರಕಾರದವರು ಒಂದು ತೀರ್ಮಾನವನ್ನು ಕೈಗೊಂಡ ಮೇಲೆ, ಆ ಕುರಿತು ಇಲ್ಲಿ ಉತ್ತರವನ್ನು ಕೊಟ್ಟ ಮೇಲೆ, ಸದನದ ಸಮಿತಿಯನ್ನು ರಚನೆ ಮಾಡಿ ಎಂದು ನೀವು ಕೇಳಿರತಕ್ಕಂಥ ಬೇಡಿಕೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಒಪ್ಪಲಿಲ್ಲ. ಆ ಸಂದರ್ಭದಲ್ಲಿ ನನ್ನ ಕಚೇರಿಗೆ ಬನ್ನಿ, ಮಾತುಕತೆ ಮಾಡಿ, ನೀವು ಇಬ್ಬರು ಒಪ್ಪಿಕೊಂಡರೆ ನನ್ನದೇನೂ ಅಭ್ಯಂತರವಿಲ್ಲ ಎಂದು ಮಾನ್ಯ ಸಭಾಧ್ಯಕ್ಷರು ಹೇಳಿದ್ದಾರೆ. ಆದ್ದರಿಂದ, ಇದರ ಬಗ್ಗೆ ಚರ್ಚೆ ಇನ್ನೂ ನಡೆದಿಲ್ಲ.

ಅಧ್ಯಕ್ಷರು : ತಾವುಗಳು ಸಹಕರಿಸಿ, ಈಗ ಬಿಡಿಎ ಬಿಲ್‌ನ್ನು ತೆಗೆದುಕೊಳ್ಳೋಣ. ಆಮೇಲೆ ಮುಖ್ಯಮಂತ್ರಿಯವರು ಬರುತ್ತಾರೆ.

ಶ್ರೀ ಎಂ.ಸಿ. ನಾಣಯ್ಯ : ಹೌದು, ಆ ಬಿಲ್ಲನ್ನು ಮುಗಿಸಿ ಬಿಡೋಣ. ಮುಂದೆ ತಾವುಗಳು you can take your own time. It is only a passage of bill. I am really grateful to

the hon.Members. You have given absolute co-operation to the Government. We are grateful. You have been very magnanimous.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನನ್ನ ಕೆಲವು ವಿಚಾರಗಳನ್ನು ತಮ್ಮ ಮೂಲಕ ಹೇಳಬೇಕಾಗುತ್ತದೆ. ತಾವುಗಳು ನಮಗೆ ಅವಕಾಶವನ್ನು ಬಹಳಷ್ಟು ಕೊಟ್ಟ ಬಗ್ಗೆ ನಾವು ಋಣಿಗಳಾಗಿದ್ದೇವೆ. ನಮ್ಮ ವಿಚಾರಗಳನ್ನು ಇವೊತ್ತು ಕೊನೆಯ ದಿನವಾದಲ್ಲಿ ಪ್ರಸ್ತಾಪ ಮಾಡಬಯಸುತ್ತೇನೆ. ಸೋಮವಾರಕ್ಕೆ ತಾವುಗಳು ಮುಂದೂಡುವುದಾದಲ್ಲಿ ಸಂತೋಷ.

ಅಧ್ಯಕ್ಷರು: ಎಲ್ಲಾ ಸದಸ್ಯರುಗಳೂ ಸೋಮವಾರದಿಂದ ಆಚೆಗೆ ತಮ್ಮ ತಮ್ಮ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಯಾವುದೇ ಇದ್ದರೂ ಇವೊತ್ತು ಮುಗಿದು ಹೋಗಬೇಕು. ಮುಂದೂಡಲು ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾನು ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ಮಾನ್ಯ ಶಾಸಕರುಗಳ ಕ್ಷೇತ್ರಗಳಿಗೆ ಒಂದು ಕೋಟಿ ರೂಪಾಯಿಗಳ ಅನುದಾನ ಕೊಡಬೇಕೆಂದು ಒತ್ತಾಯ ಮಾಡಿ ವಿಚಾರವನ್ನು ತಂದಿದ್ದೇನೆ.

ಇದರ ಬಗ್ಗೆ ಸರ್ಕಾರ ಯಾವುದೇ ಗಮನ ಕೊಡಲಿಲ್ಲ. ಪಾರ್ಲಿಮೆಂಟ್ ಸದಸ್ಯರಿಗೆ ಎರಡು ಕೋಟಿ ರೂಪಾಯಿ ಕೊಡುತ್ತಿದ್ದಾರೆ. ನಮ್ಮಲ್ಲಿ ಗ್ರಾಮಪಂಚಾಯಿತಿ ತಾಲ್ಲೂಕು ಪಂಚಾಯಿತಿ ಜಿಲ್ಲಾ ಪಂಚಾಯಿತಿಗಳಿರುವುದರಿಂದ ಶಾಸಕರಿಗೆ ಯಾವುದೇ ಕೆಲಸ ಇಲ್ಲ. ಆದ್ದರಿಂದ ಸರ್ಕಾರ ಏನೇ ಆದರೂ ಚಿಂತೆ ಇಲ್ಲ ನೇರವಾಗಿ ಒಂದು ಕೋಟಿ ರೂಪಾಯಿಗಳನ್ನು ಪ್ರತಿ ಶಾಸನಸಭಾ ಕ್ಷೇತ್ರಕ್ಕೆ ಕೊಡಬೇಕೂಂತ ಒತ್ತಾಯ. ಎರಡನೆಯದು, ಚಾಮರಾಜನಗರ ಆಸ್ಪತ್ರೆಯಲ್ಲಿ ಏನೆಂದರೇನಿಲ್ಲ. ಅದೊಂದು ತರಹ ನರಕ ಆಗಿದೆ. ಡಾಕ್ಟರುಗಳಿಲ್ಲ, ಔಷಧ ಇಲ್ಲ, ನರ್ಸ್ ಇಲ್ಲ - ಎಲ್ಲ ಸಂಪೂರ್ಣ ಕುಲಗೆಟ್ಟುಹೋಗಿದೆ. ಅದನ್ನು ಸರಿಪಡಿಸಬೇಕಾಗಿದೆ. ಮೂರನೆಯದು ನಂಜನಗೂಡಿನ ಸುಜಾತ ಕಾರ್ಮಿಕರು ಎರಡು ತಿಂಗಳಿಂದ ಸತ್ಯಾಗ್ರಹ ಮಾಡುತ್ತಿದ್ದಾರೆ, ಅವರ ಬಗ್ಗೆ ಗಮನ ಕೊಟ್ಟಿಲ್ಲ. ಸುಮಾರು ಮೂರು ಸಾವಿರ ಕಾರ್ಮಿಕರು ಬೀದಿಪಾಲಾಗಿದ್ದಾರೆ. ಅವರ ಸಮಸ್ಯೆಗಳನ್ನು ಈ ಕ್ಷಣದವರೆಗೂ ಯಾರೂ ಕೇಳಿಲ್ಲ. ಇದರ ಬಗ್ಗೆ ಕಳಕಳಿಯಿಂದ ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ. ಏಕೆ ಹೀಗೆ ಒಟ್ಟಿಗೆ ಕೇಳುತ್ತಿದ್ದೇನೆ ಅಂದರೆ ಇವತ್ತು ಕಡೇ ದಿವಸ ಆಗಿರುವುದರಿಂದ ಈ ಸಮಸ್ಯೆಗಳನ್ನು ಬಗೆಹರಿಸಿ ಎಂದು ಕೇಳುತ್ತಿದ್ದೇನೆ. ಹೈಕೋರ್ಟ್ ಪೀಠ ಹುಬ್ಬಳ್ಳಿ-ಧಾರವಾಡದಲ್ಲಿ ಆಗಬೇಕೆಂದು ನಿರಂತರವಾಗಿ ಒತ್ತಾಯ ಮಾಡಲಾಗಿದೆ. ಇದರ ಬಗ್ಗೆ ಯಾರೂ ಗಮನಹರಿಸಿಲ್ಲ. ಅಲ್ಲಿ ವಕೀಲರು ಆಮರಣಾಂತ ಉಪವಾಸ ಕೂತಿದ್ದಾರೆ. ಇಬ್ಬರು ವಕೀಲರು ಸಾಯುವ ಸ್ಥಿತಿಗೆ ಬಂದಿದ್ದಾರೆ. ಇದನ್ನೂ ಅವರು ಗಮನಕ್ಕೆ ತೆಗೆದುಕೊಂಡಿಲ್ಲ. ಚಾಮರಾಜನಗರ ಪೂಜೂರು ರಸ್ತೆಯನ್ನು ನಿರಂತರವಾಗಿ ಕೈ ಬಿಟ್ಟಿದ್ದಾರೆ. ಇದನ್ನೂ ಸರ್ಕಾರ ಗಮನಕ್ಕೆ ತೆಗೆದುಕೊಂಡಿಲ್ಲ. ಇದರ ಬಗ್ಗೆ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಸಂಗೀತ ಶಿಕ್ಷಕರನ್ನು ಸರ್ಕಾರ ನೇಮಕ ಮಾಡಬೇಕಾಗಿತ್ತು, ಅವರನ್ನೂ ನೇಮಕ ಮಾಡಲಿಲ್ಲ, ಇದು ಅಪಾಯಕಾರಿ. ಕೊನೆಯದಾಗಿ ಚಾಮರಾಜನಗರದ ಕೆಇಬಿ ಸತ್ತುಹೋಗಿದೆ. ಚಾಮರಾಜನಗರ ಕತ್ತಲೆಯಾಗಿದೆ. ಇದನ್ನು ಒತ್ತಾಯ ಮಾಡಿ ನಾನು ಆ ಕಡೆ ಧರಣ ಮಾಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮುಖ್ಯಮಂತ್ರಿಗಳು ಬರ್ತಾರೆ ಅಂದರೆ ನಾವೂ ಪ್ರಸ್ತಾಪ ಮಾಡುತ್ತೇವೆ, ಇಲ್ಲಾಂದರೆ ನಾವು ಹೊರಗಡೆ ಹೋಗುತ್ತೇವೆ. ಅಧ್ಯಕ್ಷರೇ, ತಾವು ಏನು ಆದೇಶ ಕೊಡುತ್ತೀರೋ ಅದನ್ನು ನಾವು ಪರಿಪಾಲನೆ ಮಾಡುತ್ತೇವೆ. ಇವತ್ತು ಕಡೇ ದಿವಸ ರಾಜ್ಯದ ಅನೇಕ ಸಮಸ್ಯೆಗಳನ್ನು ತಿಳಿಸಬೇಕೆಂದರೂ ಸರ್ಕಾರವೇ ಕೇಳುವ ಸ್ಥಿತಿಯಲ್ಲಿಲ್ಲ.

ಶ್ರೀ ಭೈರೇಗೌಡ : ಮುಖ್ಯಮಂತ್ರಿಗಳು ಬಂದು ಅವರ ಅಭಿಪ್ರಾಯ ತಿಳಿಸುವವರೆಗೂ ನಮ್ಮ ಮುಂದಿರುವ ಮಸೂದೆಗಳನ್ನು ತೆಗೆದುಕೊಂಡು ಕಲಾಪ ನಡೆಸೋಣ.

ಅಧ್ಯಕ್ಷರು : ಮುಖ್ಯಮಂತ್ರಿಗಳನ್ನು ಕರೆತರಲು ಹೋಗಿದ್ದಾರೆ, ಅಲ್ಲಿಯವರೆಗೆ ನಾವು ಬಿಡಿಎ ಬಿಲ್ ತೆಗೆದುಕೊಳ್ಳೋಣ.

(ಗೊಂದಲ)

ಶ್ರೀ ಚಂದ್ರಕಾಂತ ಬೆಲ್ಲದ್ : ಅಧ್ಯಕ್ಷರೇ ನಾವು ಬೆಳಗಿನಿಂದ ಕೇಳುತ್ತಿದ್ದೇವೆ, ಧಾರವಾಡ ಹುಬ್ಬಳ್ಳಿ ಮಹಾನಗರದಲ್ಲಿ ಬಂದ್ ಆಚರಣೆ ಮಾಡಿದ್ದಾರೆ. ಇಬ್ಬರು ವಕೀಲರು ಸಾಯುವ ಸ್ಥಿತಿಯಲ್ಲಿದ್ದಾರೆ. ಆಮರಣ ಉಪವಾಸ ಶುರುಮಾಡಿ 7 ದಿವಸಗಳಾಯಿತು, ಆದರೂ ಸರ್ಕಾರ ಏನೂ ಗಮನಹರಿಸುತ್ತಿಲ್ಲ.

ಶ್ರೀ ಜಗದೀಶ ಶೆಟ್ಟರ್ : ಇವತ್ತಿನವರೆಗೂ ಒಬ್ಬ ಸಚಿವರಾದರೂ ಅವರಿಗೆ ಸಮಾಧಾನ ನೀಡುವುದು ಅಥವಾ ಸ್ಪಷ್ಟ ಭರವಸೆ ನೀಡುವ ಕೆಲಸ ಮಾಡುತ್ತಿಲ್ಲ. ಹೈಕೋರ್ಟ್‌ನವರು ಏನು ಮಾಡುತ್ತಿದ್ದಾರೆ? ಅಲ್ಲಿ ಉದ್ವೇಗದ ಪರಿಸ್ಥಿತಿ ಉಂಟಾಗುವ ಸಂಭವ ಇದೆ, ಸರ್ಕಾರ ಏನು ಮಾಡುತ್ತಿದೆ? ಏನೇ ಪ್ರಶ್ನೆ ಹಾಕಿದರೂ ಹೈಕೋರ್ಟ್ ಅದನ್ನು ರಿಟ್ ಆಗಿ ಪರಿಗಣಿಸಿ ಏನಾದರೂ ಹೇಳಬೇಕಾಗುತ್ತದೆ. ಆದ್ದರಿಂದ ಸರ್ಕಾರದ ಮತ್ತು ಹೈಕೋರ್ಟಿನ ಈ ನೀತಿಯನ್ನು ಖಂಡಿಸಿ ಧರಣಿ ಸತ್ಯಾಗ್ರಹ ಮಾಡುತ್ತಿದ್ದೇವೆ.

(ಧರಣಿ ಆರಂಭಿಸುವರು)

ಶ್ರೀ ಚಂದ್ರಕಾಂತ ಬೆಲ್ಲದ್ : ಮುಖ್ಯಮಂತ್ರಿಗಳ ಮನವಿಗೆ ಶ್ರೀ ಹಿರೇಮಠ್ ಆಗಲಿ, ಮಿನಾಕ್ಷಿ ಕುಲಕರ್ಣಿ ಆಗಲಿ ಒಪ್ಪಿಕೊಂಡಿಲ್ಲ. ಮುಖ್ಯಮಂತ್ರಿಗಳು ಡಿಜಿ ಅವರನ್ನು ಕಳಿಸಿಕೊಟ್ಟಿದ್ದರು. ಅದಕ್ಕೂ ಸತ್ಯಾಗ್ರಹಿಗಳು ಒಪ್ಪಿಕೊಂಡಿಲ್ಲ. ಶ್ರೀಮತಿ ಗಂಗೂಬಾಯಿ ಹಾನಗಲ್ ಸಹ ಸತ್ಯಾಗ್ರಹದ ಉದ್ಘಾಟನೆ ಮಾಡಿದ್ದಾರೆ. ಹುಬ್ಬಳ್ಳಿಯಲ್ಲಿ ತೀವ್ರ ಪರಿಸ್ಥಿತಿ ಇದೆ, ಅನೇಕ ಜನ ಸಾಯಬಹುದು, ಉಗ್ರಕ್ರಾಂತಿ ಆಗಬಹುದು. ಅದನ್ನು ತಡೆಗಟ್ಟುವ ಕ್ರಮ ಸರ್ಕಾರ ತೆಗೆದುಕೊಳ್ಳಬೇಕಾಗಿದೆ. ರಾಷ್ಟ್ರದ ಹಿರಿಯ ನಾಯಕ ನಿಜಲಿಂಗಪ್ಪನವರು ಸಹ ನ್ಯಾಯಪೀಠವನ್ನು ಹುಬ್ಬಳ್ಳಿ - ಧಾರವಾಡಕ್ಕೆ ಕೊಡಬೇಕೆಂದು ಹೇಳಿದ್ದಾರೆ. ವಿಕೇಂದ್ರೀಕರಣ ಮಾಡಬೇಕಾದುದು ಸರ್ಕಾರದ ಕರ್ತವ್ಯ. ಅದರ ಸಲುವಾಗಿ ನಾನೂ ಧರಣಿ ನಡೆಸುವೆನು.

(ಧರಣಿ ಆರಂಭಿಸುವರು)

ಅಧ್ಯಕ್ಷರು : ನಿಮ್ಮ ಪಾಡಿಗೆ ನೀವು ಮಾತಾಡಿಕೊಳ್ಳುತ್ತಾ ಹೋಗಬಾರದು, ಈಗ ಲೀಡರ್ ಬಂದಿದ್ದಾರೆ ಖರ್ಗೆಯವರೇ, ಐದು ನಿಮಿಷ ನನ್ನ ಕಚೇರಿಗೆ ಬನ್ನಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅದಕ್ಕೆ ಮೊದಲು ಐದು ನಿಮಿಷ ಮುಂದೂಡಿ.

ಅಧ್ಯಕ್ಷರು : ಆಗಬಹುದು, 10 ನಿಮಿಷ ಕಾಲ ಸಭೆಯನ್ನು ಮುಂದೂಡಲಾಗಿದೆ. ಸಭೆಯು 4.08 ಕ್ಕೆ ಮುಂದೂಡಲ್ಪಟ್ಟಿತು.

(ಸದನವು ಪುನಃ 4 ಗಂಟೆ 50 ನಿಮಿಷಕ್ಕೆ ಸಮಾವೇಶಗೊಂಡಿತು)

(ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಭಾರತೀಯ ಜನತಾ ಪಕ್ಷದ ಸದಸ್ಯರಾದ ಶ್ರೀ ಚಂದ್ರಕಾಂತ್ ಬೆಲ್ಲದ್ ಹಾಗೂ ಶ್ರೀ ಜಗದೀಶ್ ಶೆಟ್ಟರ್ ಹಾಗೂ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಎಲ್ಲಾ ಸದಸ್ಯರುಗಳೂ ಕೂಡ ಸದನದ ಬಾವಿಯಲ್ಲಿದ್ದರು)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾವು ತಮ್ಮ ಛೇಂಬರ್‌ನಲ್ಲಿ ಡಿಸ್ಕಸ್ ಮಾಡಿದ ಹಾಗೆ ಸರ್ಕಾರದ ಮುಂದೆ 2-3 ಪ್ರಪೋಸಲ್‌ಗಳನ್ನು ಇಟ್ಟಿದ್ದೆವು. ಮೊದಲನೆಯದಾಗಿ, ಈ ಸರ್ಕಾರ ಪಾರದರ್ಶಕತ್ವದಲ್ಲಿ ನಂಬಿಕೆ ಇಟ್ಟಿದೆ ಪ್ರತಿಯೊಂದು ಹಂತದಲ್ಲಿ ನಾವು ಸರ್ಕಾರದಲ್ಲಿ ಏನು ನಡೆದಿದೆ ಎಂಬುದನ್ನು ನೋಡಬಹುದು ಎಂಬ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಬೈವಾಟರ್ ಸಂಸ್ಥೆಗೆ ಗುತ್ತಿಗೆ ವಹಿಸಿದ್ದರಲ್ಲಿ ಯಾವುದೇ ಅವ್ಯವಹಾರವಾಗಲಿ ಅಥವಾ ನಿಯಮ ಉಲ್ಲಂಘನೆಯಾಗಲಿ ಆಗಿಲ್ಲ ಎಂಬ ಮಾತನ್ನು ಅವರು ಹೇಳಿದರು. ನಾವು ಸರ್ಕಾರದ ಮುಂದೆ ಇದರ ಬಗ್ಗೆ ತನಿಖೆ ನಡೆಸಲು ಸದನದ ಸಮಿತಿ ರಚಿಸಿ ಅಥವಾ ಈ ವಿಷಯವನ್ನು ತನಿಖೆಗಾಗಿ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಗೆ ವಹಿಸಿ ಅಥವಾ ಇದಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಮಾನ್ಯ ಅಧ್ಯಕ್ಷರಿಗೆ ನೀಡಿ, ಅವರು ಅದನ್ನು ಪರಿಶೀಲಿಸಲಿ ಎಂಬ ಪ್ರಸ್ತಾವನೆಗಳನ್ನು ಇಟ್ಟಿದ್ದೆವು. ಇದನ್ನು ಪಿಎಸಿ ಕಮಿಟಿಗೆ ವಹಿಸುವುದಕ್ಕಾಗುವುದಿಲ್ಲ, ಅದರ ಪರ್‌ವ್ಯೂದಲ್ಲಿ ಇದು ಬರುವುದಿಲ್ಲ ಎಂಬ ವಾದವನ್ನು ಅವರು ಇಟ್ಟರು. ಆದರೆ ನಾವು ಈ ಹಿಂದೆ ಅನೇಕ ಪ್ರಕರಣದಲ್ಲಿ ಪಿಎಸಿ ಗೆ ರೆಫರ್ ಮಾಡಲಾಗಿದೆ ಎಂಬ ವಾದವನ್ನು ಮಾಡಿದ್ದೆವು. ಸರ್ಕಾರ ಸದನ ಸಮಿತಿ ರಚಿಸಲು ಒಪ್ಪುವುದಿಲ್ಲ ಅಥವಾ ಪಿಎಸಿ ಕಮಿಟಿಗೆ ರೆಫರ್ ಮಾಡಲು ಒಪ್ಪುವುದಿಲ್ಲ ಎನ್ನುವುದಾದರೆ, ಮಾನ್ಯ ಅಧ್ಯಕ್ಷರೇ ತಾವೇ ಇದಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ತರಿಸಿಕೊಂಡು ಪರಿಶೀಲನೆ ಮಾಡಿ. ಈ ವಿಷಯವನ್ನು ಪಿಎಸಿಗೆ ರೆಫರ್ ಮಾಡಲು ಸಾಧ್ಯವಿದ್ದರೆ ಹಾಗೆ ಮಾಡಿ, ಸಾಧ್ಯವಿಲ್ಲದಿದ್ದರೆ ಇದನ್ನು ಹೌಸ್ ಕಮಿಟಿಗಾದರೂ ರೆಫರ್ ಮಾಡಿ. ಇದರಿಂದಾಗಿ ಈ ವಿಷಯಕ್ಕೆ ಮುಕ್ತಾಯ ಹಾಡುವುದು ಸಾಧ್ಯವಾಗುತ್ತದೆ. ಬೇರೆ ಯಾವುದೇ ದೃಷ್ಟಿಯಿಂದ ನಾವು ಇದನ್ನು ಪ್ರಸ್ತಾಪ ಮಾಡುತ್ತಿಲ್ಲ. ಈ ಸಂಸ್ಥೆಗೆ ಗುತ್ತಿಗೆ ನೀಡಿರುವುದರಲ್ಲಿ ಕಾನೂನು ಉಲ್ಲಂಘನೆಯಾಗಿದೆ. ಅನೇಕ ಫರ್ಮ್ಸ್‌ಗಳು ಇದ್ದರೂ ಕೂಡ ಇದೊಂದೇ ಫರ್ಮ್‌ಗೇ ಫೇವರ್ ಮಾಡತಕ್ಕ ಕೆಲಸ ಸರ್ಕಾರದಿಂದ ಆಗಿದೆ ಎಂಬತಕ್ಕಂಥ ಆಪಾದನೆ ಮೀಡಿಯಂ ಮುಖಾಂತರ ಕೇಳಿ ಬರುತ್ತಿದೆ. ಅನೇಕ ಜನರೂ ಕೂಡ ಆ ರೀತಿ ಮಾತನಾಡಿಕೊಳ್ಳುತ್ತಿದ್ದಾರೆ. ಈ ಎಲ್ಲಾ ಸಂಶಯಗಳನ್ನು ನಿವಾರಣೆ ಮಾಡಬೇಕಾದರೆ, ಇರುವುದು ಇದೊಂದೇ ದಾರಿ ಎನ್ನುವ ದೃಷ್ಟಿಯಿಂದ ನಾವು ನಿಮಗೆ ಹೇಳುತ್ತಿದ್ದೇವೆ. ಬೇರೆ ಯಾವ ಉದ್ದೇಶವೂ ಕೂಡ ಇದರಲ್ಲಿ ಇಲ್ಲ. ಸದನದ ಕಾರ್ಯಕಲಾಪಗಳಿಗೆ ಧಕ್ಕೆ ತರಬೇಕೆಂಬ ಉದ್ದೇಶವೂ ಕೂಡ

ನಮಗೆ ಇಲ್ಲ. ಮಾನ್ಯ ಸಚಿವರುಗಳು ಉತ್ತರ ಕೊಡುವುದಕ್ಕೂ ನಾವು ಅವಕಾಶ ಮಾಡಿಕೊಟ್ಟಿದ್ದೇವೆ. ವಿಧೇಯಕಗಳು ಪಾಸ್ ಆಗುವುದಕ್ಕೂ ಕೂಡ ಅವಕಾಶ ಮಾಡಿಕೊಟ್ಟಿದ್ದೇವೆ. ಕೋರಂ ಇಲ್ಲದೇ ಇದ್ದಾಗ ಕೂಡ ನಾವೇ ಕೋರಂ ಮಾಡಿ ಅನೇಕ ಸಾರಿ ಡಿಸ್ಕಷನ್ ಪ್ರಾರಂಭ ಮಾಡಿದಂತಹ ಉದಾಹರಣೆಗಳೂ ಕೂಡ ತಮಗೆ ಗೊತ್ತಿದೆ. ಆದುದರಿಂದ, ದಯವಿಟ್ಟು ಈ ಮೂರು ಪ್ರಪೋಸಲ್‌ಗಳಲ್ಲಿ ಯಾವುದಾದರೂ ಒಂದಕ್ಕೆ ತಾವು ಮನ್ನಣೆ ಕೊಡುತ್ತೀರಿ ಎಂದು ಮಾನ್ಯ ಮುಖ್ಯಮಂತ್ರಿಗಳನ್ನು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : ನನ್ನ ಛೇಂಬರ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ವಿರೋಧ ಪಕ್ಷದ ನಾಯಕರ ಜೊತೆಗೆ ಮಾತನಾಡಿದಾಗ ಒಂದು ಪ್ರಪೋಸಲ್‌ಗೆ ಅವರಿಬ್ಬರಿಂದಲೂ ಸ್ವಲ್ಪ ಮಟ್ಟಿಗೆ ಸಹಮತ ಬಂತು. ನನ್ನ ಕಡೆ ದಾಖಲಾತಿಗಳನ್ನು ಕಳುಹಿಸಿಕೊಟ್ಟು, ನಾನು ಅವುಗಳನ್ನು ನೋಡಿ ತೀರ್ಮಾನ ತೆಗೆದುಕೊಳ್ಳಬೇಕು ಎಂಬ ಬಗ್ಗೆ ಸ್ವಲ್ಪಮಟ್ಟಿನ ಸಹಮತಿ ಬಂತು. ನಾನು ಅಲ್ಲೇ ಯಾವ ಪ್ರಿಸರ್ವೇಷನ್ಸ್ ಇಲ್ಲದೇ ಆ ಜವಾಬ್ದಾರಿಯನ್ನು ಹೊರಲಿಕ್ಕೆ ನಾನು ಸಿದ್ಧವಿಲ್ಲ ಎಂಬುದನ್ನು ಹೇಳಿದೆ. ಪಿಎಸಿ ಕಮಿಟಿಗೆ ಅಥವಾ ಹೌಸ್ ಕಮಿಟಿಗೆ ಮಹಿಸುವ ಬಗ್ಗೆ ಮಾನ್ಯ ಖಿರ್ಗೆಯವರು ಪ್ರಪೋಸಲ್ ಇಟ್ಟರು. ಅದನ್ನು ಒಪ್ಪುವುದೂ ಬಿಡುವುದೂ ಅವರದಾಗಿತ್ತು. ಮಾನ್ಯ ಮುಖ್ಯಮಂತ್ರಿಗಳು ಅದಕ್ಕೆ ಒಪ್ಪಲಿಲ್ಲ. ಕಳೆದ ನಾಲ್ಕೂವರೆ ವರ್ಷಗಳಲ್ಲಿ ಮೊದಲ ಬಾರಿಗೆ ನನ್ನ ಕಛೇರಿಯಲ್ಲಿ ನಡೆದ ಮಾತುಕತೆ ವಿಫಲವಾಯಿತು. ನನಗೂ ಅದರ ಬಗ್ಗೆ ಬೇಸರ ಇದೆ. ಬೇರೆ ಮಾರ್ಗವೇ ಇಲ್ಲ. ತಾವು ಹೇಳಿದಂತೆ ಇದುವರೆಗೆ ಎಲ್ಲಾ ಸನ್ನಿವೇಶಗಳಲ್ಲೂ ಸಹಕಾರ ಕೊಟ್ಟಿದ್ದೀರಿ. ನಾನು ಇಲ್ಲವೆಂದು ಹೇಳುವುದಿಲ್ಲ. ಹೆಚ್ಚಿನ ಜವಾಬ್ದಾರಿಗಳನ್ನು ವಿರೋಧ ಪಕ್ಷದವರು ಹೊತ್ತುಕೊಂಡು ಈ ಸದನದ ಕಲಾಪಗಳನ್ನು ತಾವು ನಡೆಸಿಕೊಟ್ಟಿದ್ದೀರಿ. ಆ ವಿಚಾರದಲ್ಲಿ ನಾನು ತಮಗೆ ಆಭಾರಿಯಾಗಿದ್ದೇನೆ.

ಈಗ ಮುಂದಿನ ಕಲಾಪ ನಡೆಸಲೇ ಬೇಕಾಗಿದ್ದರಿಂದ ನಾನು ತಮ್ಮ ಸಹಕಾರ ಕೋರುತ್ತಿದ್ದೇನೆ. ದಯಮಾಡಿ ನನಗೆ ಅವಕಾಶ ಮಾಡಿಕೊಡಬೇಕು. ವಿಧೇಯಕ ಏನಿದೆ ಅದನ್ನು ಎರಡು-ಮೂರು ಸಾರಿ ತಡೆಹಿಡಿದಿದ್ದೇವೆ, ಈಗ ವಿಧೇಯಕ ತೆಗೆದುಕೊಳ್ಳುತ್ತೇನೆ, ದಯಮಾಡಿ ತಾವು ತಮ್ಮ ಸಹಕಾರ ಕೊಡಬೇಕು.

+ ಶ್ರೀ ಕೆ.ಎಸ್. ಈಶ್ವರಪ್ಪ : ಒಂದು ಪ್ರಮುಖ ವಿರೋಧ ಪಕ್ಷವನ್ನು ಹೊರಗಡೆ ಇಟ್ಟುಕೊಂಡು ನಾವು ಕಲಾಪ ಮುಂದುವರೆಸಿದರೆ ಖಂಡಿತ ಅಷ್ಟು ಒಳ್ಳೆಯದಾಗುವುದಿಲ್ಲ. ಈ ಪದ್ಧತಿ ಮುಂದುವರಿದರೆ ನಿಜವಾಗಿಯೂ ಪ್ರಜಾಪ್ರಭುತ್ವದಲ್ಲಿ ಅರ್ಥವಿಲ್ಲ ಎನ್ನುವ ಮಟ್ಟಕ್ಕೆ ಬರುತ್ತದೆ. ಇಬ್ಬರೂ ಕೂಡ ಪ್ರತಿಷ್ಠೆಗೆ ತೆಗೆದುಕೊಂಡು ಹೋಗುವ ವ್ಯವಸ್ಥೆ ತಪ್ಪಾಗುತ್ತದೆ. ಅದರಲ್ಲೂ ವಿಧೇಯಕ ಮಾಡುವಂತಹ ಸಂದರ್ಭದಲ್ಲೂ ಪ್ರಮುಖವಾದ ವಿರೋಧ ಪಕ್ಷ ಹೊರಗಡೆ ಇಟ್ಟುಕೊಂಡು ಮುಂದುವರೆಸಿಕೊಂಡು ಹೋಗುವುದು ಯಾವ ಕಾರಣಕ್ಕೂ ಒಳ್ಳೆಯದಾಗುವುದಿಲ್ಲ. ಮುಖ್ಯಮಂತ್ರಿಗಳಿಗೂ ಕೂಡ ಏಕೆ ಇಷ್ಟು ಹಠ ಇದೆ ಗೊತ್ತಿಲ್ಲ. ಪಾರದರ್ಶಕತೆ ದೃಷ್ಟಿಯಿಂದ ಸದನ ಸಮಿತಿ ಮಾಡಬೇಕಾಗಿತ್ತು. ಅವರು ಹಠ ಮಾಡುತ್ತಾರೆ. ಬೆಳಿಗ್ಗಿನಿಂದ ಸಾಕಷ್ಟು ನಾವು ಎಲ್ಲ ರೂಪದಲ್ಲೂ ಕೂಡ ಸರ್ಕಾರಕ್ಕೆ ಏನೇನು ಹೇಳಬೇಕು ಎಲ್ಲ ಹೇಳಿದರೂ ಕೂಡ ಅವರು ಗಮನ ಕೊಡುತ್ತಿಲ್ಲ. ನಾನು ಯಾವುದಾದರೂ ಒಂದು ರೂಪಕ್ಕೆ,

ವಿರೋಧ ಪಕ್ಷದ ನಾಯಕರು ಹೇಳಿದರೂ ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿಗಾದರೂ ತರಬಹುದು ಅಥವಾ ಸದನ ಸಮಿತಿಗಾದರೂ ತರಬಹುದು ಎಂದು ಹೇಳಿದರೂ ಯಾವುದಕ್ಕೂ ಸರ್ಕಾರ ಬಗ್ಗದೆ ಇರುವಂತಹ ಸಂದರ್ಭದಲ್ಲಿ ಅವರನ್ನು ಹೊರಗಡೆ ಇಟ್ಟುಕೊಂಡು ಮಾಡುವುದು ಅಷ್ಟು ಸೂಕ್ತವಲ್ಲ. ಮುಖ್ಯಮಂತ್ರಿಗಳು ಇದನ್ನು ಸ್ಪಷ್ಟವಾಗಿ ಹೇಳಲಿ, ಸದನ ಸಮಿತಿ ಮಾಡುತ್ತೇವೆ, ಇಲ್ಲ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಗೆ ರೆಫರ್ ಮಾಡುತ್ತೇವೆಂದು. ಅದು ಆದರೆ, ಖಂಡಿತ ಸುಲಭವಾಗಿ ಮುಗಿದು ಹೋಗುತ್ತದೆ. ಇಲ್ಲದಿದ್ದರೆ ಅವರಿಗೆ ಹೊರಗಡೆ ಇಟ್ಟುಕೊಂಡು ಮುಂದುವರೆಸಿಕೊಂಡು ಹೋಗುವ ರೀತಿ ಯಾವ ಕಾರಣಕ್ಕೂ ಸರಿ ಹೋಗುವುದಿಲ್ಲ. ಯಾವುದೋ ದಾಕ್ಷಿಣ್ಯಕ್ಕೆ ಪ್ರತಿಷ್ಠೆಗೆ ಇದು ಕೊನೆ ಆಗಬಾರದು. ಅದೂ ಇವತ್ತು ಕೊನೆ ದಿನ, ಎಲ್ಲ ಸದಸ್ಯರೂ ಅವರವರ ಕ್ಷೇತ್ರದ ಬೇರೆ ಬೇರೆ ಸಮಸ್ಯೆಗಳನ್ನು ಚರ್ಚೆ ಮಾಡುವುದಕ್ಕೆ ಕಾಯುತ್ತಿದ್ದಾರೆ. ವಿಧೇಯಕಗಳ ಬಗ್ಗೆ ಚರ್ಚೆಯಾಗಬೇಕು. ತಮ್ಮ ಘನ ಅಧ್ಯಕ್ಷತೆಯಲ್ಲಿ ಈ ರೀತಿ ಅವರನ್ನು ಹೊರಗಡೆ ಇಟ್ಟುಕೊಂಡು ಕಲಾಪ ಮುಂದುವರಿಸುವುದು ಯಾವ ಕಾರಣಕ್ಕೂ ಸರಿಯಲ್ಲ. ನಾಲ್ಕೂವರೆ ವರ್ಷಗಳಲ್ಲಿ ಈ ವ್ಯವಸ್ಥೆ ನಡೆದಿಲ್ಲ. ನಾನು ಮುಖ್ಯಮಂತ್ರಿಯವರಿಗೆ ಮನವಿ ಮಾಡುತ್ತೇನೆ, ಎರಡರಲ್ಲಿ ಒಂದು ಏನಾದರೂ ಸದನ ಸಮಿತಿಗಾದರೂ ರೆಫರ್ ಮಾಡುವುದು, ಇಲ್ಲ ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿಗಾದರೂ ರೆಫರ್ ಮಾಡುವುದು ಒಳಗಡೆ ಚರ್ಚೆ ಮಾಡುವಾಗ ಅದು ಆಗಲ್ಲವೆಂದು ಹೇಳಿದರು. ಈಗಲೂ ದೊಡ್ಡ ಮನಸ್ಸು ಮಾಡಿ ಮುಂದುವರಿಸಿದರೆ ಅನುಕೂಲವಾಗಬಹುದು ಎಂದು ನಾನು ತಮ್ಮ ಮುಖಾಂತರ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ : ಎಷ್ಟು ಸಾರಿ ಹೇಳಲಿ, ಆಗುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ಕೊನೆಗೆ ವಿರೋಧ ಪಕ್ಷದ ನಾಯಕರಿಗೆ ಮನವಿ ಮಾಡುತ್ತೇನೆ, ಏಕೆಂದರೆ, ಇಡೀ ರಾಜ್ಯದ ವಿಚಾರಗಳು ಬಹಳವಿರುವುದರಿಂದ ಮುಖ್ಯಮಂತ್ರಿಗಳು ಯಾವ ಕಾರಣಕ್ಕೂ ಆಗುವುದಿಲ್ಲವೆಂದು ತುಂಬ ಸ್ಪಷ್ಟವಾಗಿ ಕಠೋರವಾಗಿ ಹೇಳಿದ ಮೇಲೆ, ಈ ರಾಜ್ಯದ ಜನತೆ ಮುಂದೆ ಈ ಸರ್ಕಾರ ಏನೇನು ತಪ್ಪು ಮಾಡಿದೆ ಎಂದು ಹೇಳಿಯಾಗಿದೆ. ವಿರೋಧ ಪಕ್ಷದ ನಾಯಕರಿಗೆ ಮನವಿ ಮಾಡುತ್ತೇನೆ, ಅವರಾದರೂ ಕೂಡ ಸದನದ ಕಲಾಪದಲ್ಲಿ ಭಾಗವಹಿಸಿ ಸದನದ ಕಲಾಪಗಳು ಮುಗಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿ, ನಾವೂ ಕೂಡ ಅದಕ್ಕೆ ಪ್ರತಿಭಟನೆ ಸಭಾತ್ಯಾಗ ಎಲ್ಲ ಮಾಡಿ ಆಯಿತು. ಈ ಸರ್ಕಾರ ಬಗ್ಗುವುದಿಲ್ಲ ಎಂದು ಹೇಳಿದ ಮೇಲೆ ವಿರೋಧ ಪಕ್ಷಕ್ಕೆ ಉಳಿದಿರುವುದು ಎರಡೇ ದಾರಿ. ಇಲ್ಲ ಸಭಾತ್ಯಾಗ ಮಾಡಬೇಕು, ಇಲ್ಲ ಧರಣ ಮಾಡಬೇಕು. ಕೊನೆ ದಿನ ರಾತ್ರಿ ಎಲ್ಲ ಕೂತುಕೊಳ್ಳುವುದಕ್ಕೆ ನಾವು ತಯಾರಿದ್ದೇವೆ. ಬೇರೆ ಬೇರೆ ಸಮಸ್ಯೆಗಳು ತುಂಬ ಇರುವುದರಿಂದ ವಿರೋಧ ಪಕ್ಷದ ನಾಯಕರೂ ಕೂಡ ದೊಡ್ಡ ಮನಸ್ಸು ಮಾಡಿ ಸರ್ಕಾರದ ವಿಚಾರವನ್ನು ನಾಳೆ ಚುನಾವಣೆ ಇದೆ, ಜನರ ಮುಂದೆ ಹೋಗಿ ಇವರು ಏನೇನು ತಪ್ಪು ಮಾಡಿದ್ದಾರೆಂದು ಹೇಳುವುದಕ್ಕೆ ದೊಡ್ಡ ಅವಕಾಶ. ಇದು ಒಂದು ಭೋಫೋರ್ಸ್‌ಗಿಂತ ದೊಡ್ಡ ಸ್ಕ್ಯಾಂಡಲ್ ಎಂದು ಹೇಳುವುದಕ್ಕೆ ಇದು ಒಂದು ಅಭಿಪ್ರಾಯ ಆಗಲೇ ರಾಜ್ಯದಲ್ಲಿ ಬಂದಿರುವಂತಹ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರಿಗೆ ಮನವಿ ಮಾಡುತ್ತೇನೆ, ಶಿವರಾಮೇಗೌಡರಿಗೆ ಸ್ಕ್ಯಾಂಡಲ್ ಎನ್ನುವುದು ಮಾಮೂಲಿಯಾಗಿದೆ.

ಅವರಿಗೆ ಯಾವುದು ಸ್ಕ್ಯಾಂಡಲ್, ಯಾವುದು ಸ್ಕ್ಯಾಂಡಲ್ ಅಲ್ಲ ಎಂದು ಗೊತ್ತಾಗುವುದಿಲ್ಲ. ನಾನು ಅವರ ಜೊತೆ ಚರ್ಚೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ನಾನು ವಿರೋಧ ಪಕ್ಷದ ನಾಯಕರಿಗೆ ಮನವಿ ಮಾಡುತ್ತೇನೆ, ಅವರು ಇಷ್ಟರ ಮಟ್ಟಿಗೆ ಕಠೋರವಾಗಿ ಹೇಳಿದ ಮೇಲೆ ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷ ಮತ್ತು ಆಡಳಿತ ಪಕ್ಷ ಏಕೆ ಇರಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಪದೇ ಪದೇ ನಾವು ಇದನ್ನೇ ಪ್ಲೀಡ್ ಮಾಡುವುದು, ಅವರು ಒಂದೇ ಮಾತಿನಲ್ಲಿ ನಾವು ಒಪ್ಪುವುದಿಲ್ಲವೆಂದು ಹೇಳುವುದು ಅಷ್ಟೊಂದು ವಾತಾವರಣ ಸರಿ ಹೋಗುವುದಿಲ್ಲ. ಅದಕ್ಕೆ ನಾವು ನಿರ್ಧಾರ ಮಾಡಿದ್ದೇವೆ, ಏಕೆಂದರೆ, ಇದಕ್ಕಂತೂ ನಾವು ಪಾರ್ಟಿಯಾಗುವುದಿಲ್ಲ, ಸರಿ ಅವರು ನಾವು ನಿಮ್ಮನ್ನು ಬಿಟ್ಟು ಎಲ್ಲ ಕಾನೂನು ಮಾಡುತ್ತೇವೆಂದರೆ, ಅದಕ್ಕೂ ನಾವು ಪಾರ್ಟಿ ಆಗುವುದಿಲ್ಲ. ಏಕೆಂದರೆ ನಾವು ಧರಣಿ ಇರುವಾಗ ಪಾಸ್ ಮಾಡಿಸಿಕೊಂಡರು, ಇದರಲ್ಲಿ ಏನೇ ಡಿಫೆಕ್ಟ್ ಇದ್ದರೂ ನಮಗೆ ಏನೂ ಸಂಬಂಧವಿಲ್ಲ ಎಂದು ಹೇಳಬಹುದು. ಏಕೆಂದರೆ ಸುಮಾರು 20 ದಿವಸಗಳಿಂದ ನಡೆದಂತಹ ಸದನಕ್ಕೆ ನಾವು ಸಂಪೂರ್ಣವಾದ ಸಹಕಾರ ಕೊಟ್ಟು, ಅಲ್ಟರ್ನೇಟ್ ನಾವು ಸದನ ಸಮಿತಿ ಒಂದೇ ಆಗಬೇಕೆಂದು ಹಟ ಹಿಡಿದುಕೊಂಡು ಕೊನೆವರೆಗೆ ಕೂತಿಲ್ಲ. ಮಾತುಕತೆಗೆ ಬಂದ ಮೇಲೆ ಮೂರು ಛಾಯ್ಸ್ ಕೊಟ್ಟಿದ್ದೇನೆ. ಇಲ್ಲ ಅಧ್ಯಕ್ಷರೆ, ನೋಡಲಿ, ಅಧ್ಯಕ್ಷರು ನೋಡಿಕೊಂಡು ಆ ರೆಕಾರ್ಡ್ಸ್ ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿಗೆ ರೆಫರ್ ಮಾಡತಕ್ಕಂತಹ ನಿಯಮ ಇದೆ. ಕಾನೂನು ಪ್ರಕಾರ ಬರುತ್ತದೆ ಎಂದರೆ ಮಾಡಲಿ. ಇಲ್ಲವೆಂದರೆ ಸದನ ಸಮಿತಿ ಮಾಡಲಿ ಇದು ಅವರಿಗೆ ಬಿಟ್ಟಿದ್ದು ಎಂದು ಹೇಳಿದ್ದೇವೆ. ಸೋಮೋಟೋ ಸದನ ಸಮಿತಿ ಮಾಡುತ್ತೇವೆಂದು ಹೇಳಿ ಅದಕ್ಕೂ ಕೂಡ ಒಪ್ಪಿಗೆ ಇದೆ ಎಂದು ಹೇಳಿದವು. ಸೋಮೋಟೋ ಪಿಎಸಿಗೆ ರೆಫರ್ ಮಾಡುತ್ತೇವೆಂದು ಹೇಳಿದರೆ ಅದಕ್ಕೂ ಒಪ್ಪಲಿಲ್ಲ. ಇಷ್ಟು ಅಲ್ಟರ್ನೇಟೀವ್ ಕೊಟ್ಟರೂ ಒಪ್ಪಲಿಲ್ಲ ವೆಂದರೆ ನೀವು ನಿಮ್ಮ ಬಿಸ್‌ನೆಸ್ ನಡೆಸಿಕೊಂಡು ಹೋಗಿ ನಾವು ತಾಪತ್ರಯ ಮಾಡವುದಿಲ್ಲ. ಜನ ನೋಡಲಿ, ದೇಶಕ್ಕೂ ಗೊತ್ತಾಗಲಿ. ಪ್ರಮುಖವಾದ ಪಕ್ಷಕ್ಕೆ ಹೊರಗಡೆ ಇಟ್ಟು ಎಲ್ಲ ವಿಧೇಯಕಗಳನ್ನು ಪಾಸ್ ಮಾಡುತ್ತಾರೆಂದರೆ ಪಾಸ್ ಮಾಡಿಕೊಳ್ಳಿ. ನಾವು ಅಡ್ಡಿ, ಆಡಚಣೆ ಮಾಡುವುದಿಲ್ಲ. ಒಂದು ಸ್ಲೋಗನ್ ಕೂಡ ಮಾಡುವುದಿಲ್ಲ, ಮೂಕ ಪ್ರೇಕ್ಷಕರ ಹಾಗೆ ಕೂತು ಬಿಡುತ್ತೇವೆ. ನೀವು ಮಾಡಿಕೊಳ್ಳಿ.

ಅಧ್ಯಕ್ಷರು : ನಮ್ಮ ಎಲ್ಲ ಪ್ರಯತ್ನಗಳು ವಿಫಲವಾಗಿದ್ದರಿಂದ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಲಭ್ಯವಿರತಕ್ಕಂತಹ ಎಲ್ಲ ಪ್ರಯತ್ನಗಳನ್ನು ನಾನು ಮಾಡಿದ್ದೇನೆ. ಇಂತಹ ಸನ್ನಿವೇಶವನ್ನು ನಾನು ಬಯಸಲಿಲ್ಲ. ಈ ನಾಲ್ಕೂವರೆ ವರ್ಷಗಳಲ್ಲಿ ಒಂದು ಸಲ ಮಾನ್ಯ ದೇವೇಗೌಡರು ಮುಖ್ಯ ಮಂತ್ರಿಗಳಾಗಿದ್ದಾಗ ಮಾತ್ರ ಡಿಮ್ಯಾಂಡ್ಸ್ ಪಾಸ್ ಮಾಡುವ ವೇಳೆಗೆ ತಾವು ಧರಣಿ ಮಾಡುತ್ತಿದ್ದಿರಿ, ಡಿಮಾಂಡ್ಸ್ ಪಾಸ್ ಮಾಡಿದ್ದೆವು. ಅದರ ಹೊರತಾಗಿ ಇಂತಹ ವಾತಾವರಣ ಬಂದಿರಲಿಲ್ಲ, ಬರುತ್ತದೆ ಎಂದು ನಾನು ನಿರೀಕ್ಷೆ ಕೂಡ ಮಾಡಿರಲಿಲ್ಲ. ಅತ್ಯಂತ ವಿಶಾದದಿಂದ ನಾನು ನನ್ನ ಹೊಣೆಯನ್ನು ನಿರ್ವಹಣೆ ಮಾಡಬೇಕಾಗುತ್ತದೆ. ದಯಮಾಡಿ ಯಾರೂ ಅನ್ಯಥಾ ಭಾವಿಸಬಾರದು.